# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 422

**ಮಾನ್ಯ ಸದಸ್ಯರ ಹೆಸರು** : ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು)

**ಉತ್ತರಿಸಬೇಕಾದ ದಿನಾಂಕ** : 18-07-2024

**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ದ್ವೀಪ ಪ್ರವಾಸೋದ್ಯಮಕ್ಕೆ ಯಾವ ಕ್ರಮಕೈಗೊಳ್ಳಲಾಗಿದೆ; ಇದಕ್ಕಾಗಿ ಗುರುತಿಸಿರುವ ದ್ವೀಪ ಯಾವುವು; | ಉಡುಪಿ ಜಿಲ್ಲೆಯ ಸ್ಯೆಂಟ್ ಮೇರೀಸ್ ದ್ವೀಪವನ್ನು ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಲಾಗಿದೆ. ಇದರ ಅಭಿವೃದ್ಧಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>1. ಸ್ಯೆಂಟ್ ಮೇರೀಸ್ ಐಲ್ಯಾಂಡ್ ಬಳಿ ಜೆಟ್ಟಿ ನಿರ್ಮಾಣ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ರೂ.550.00 ಲಕ್ಷ ಮೊತ್ತದಲ್ಲಿ ಕೈಗೊಳ್ಳಲು ಕಾಮಗಾರಿ ಮಂಜೂರಾಗಿತ್ತು. ಆದರೆ, ಜಿಲ್ಲಾಧಿಕಾರಿಗಳ ಕೋರಿಕೆಯಂತೆ ಸದರಿ ಕಾಮಗಾರಿಯನ್ನು ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದ ಮೂಲಕ ಅನುಷ್ಠಾನಗೊಳಿಸಲು ಪ್ರಸ್ತಾವನೆ ಸ್ವೀಕೃತಗೊಂಡಿರುತ್ತದೆ.<br><br>ಈ ಮಧ್ಯೆ, ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ/1/ಟಿಎಫ್ ಪಿ/2023, ದಿನಾಂಕ: 31.07.2023 ರಲ್ಲಿನ ಅಂಶಗಳ ಕ್ರ.ಸಂ.3 ರಂತೆ ಅನುಮೋದನೆಗೊಂಡು ಇನ್ನೂ ಪ್ರಾರಂಭವಾಗದಿರುವ (Unstarted) ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಗೆ ತಿಳಿಸಲಾಗಿರುತ್ತದೆ.<br><br>2. ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಉಡುಪಿ ರವರು ಸ್ಯೆಂಟ್ ಮೇರೀಸ್ ಐಲ್ಯಾಂಡ್ ಮ್ಯಾನೇಜ್‌ಮೆಂಟ್ ಪ್ಲಾನ್ ಅನ್ನು NIWS (National Institute of Water Sports) ಗೋವಾ ಸಂಸ್ಥೆಯಿಂದ ತಯಾರಿಸಿಕೊಳ್ಳಲಾಗುತ್ತಿದೆ.<br><br>ರಾಜ್ಯದಲ್ಲಿ ದ್ವೀಪ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಯಾವುದೇ ಪ್ರತ್ಯೇಕ ಕ್ರಮಗಳನ್ನು ಕೈಗೊಳ್ಳಲಾಗಿರುವುದಿಲ್ಲ.<br><br>ರಾಜ್ಯದಲ್ಲಿರುವ ಕಡಲ ತೀರಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ವಿರಾಮ, ಮನರಂಜನೆ ಮತ್ತು ಸಾಹಸ ಚಟುವಟಿಕೆಗಳನ್ನು |

| | | |
|---|---|---|
| | | ಅಭಿವೃದ್ಧಿಪಡಿಸಲು ಸಾಹಸ ಪ್ರವಾಸೋದ್ಯಮ ಯೋಜನೆ, ಪರಿಸರ ಪ್ರವಾಸೋದ್ಯಮ ಯೋಜನೆ ಮತ್ತು ಬೋಟ್ ಹೌಸ್ ಯೋಜನೆಗಳನ್ನು ಮುಂದೆ ಬರುವ ಖಾಸಗೀ ಹೂಡಿಕೆದಾರರಿಗೆ ಸಹಾಯಧನ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಕರ್ನಾಟಕ ಪ್ರವಾಸೋದ್ಯಮ ನೀತಿ 2020-26 ರಡಿ ಅವಕಾಶ ಕಲ್ಪಿಸಲಾಗಿದೆ. |
| ಆ) | ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಬೋಟ್ ಹೌಸ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೆ; ಪ್ರಸ್ತುತ ರಾಜ್ಯದಲ್ಲಿ ಎಲ್ಲಿ ಬೋಟ್ ಹೌಸ್ ಸೌಲಭ್ಯ ಲಭ್ಯವಿದೆ; ಬೋಟ್ ಹೌಸ್‌ಗಳನ್ನು ನಿರ್ಮಿಸಿ ನಿರ್ವಹಿಸುವ ಬಗ್ಗೆ ಸರ್ಕಾರದ ನಿಲುವೇನು; ಖಾಸಗಿಯವರು ಬೋಟ್ ಹೌಸ್ ಹೊಂದಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ; ಖಾಸಗಿಯವರು ಬೋಟ್ ಹೌಸ್ ಹೊಂದಲು ಸರ್ಕಾರ ಪ್ರೋತ್ಸಾಹ ನೀಡುತ್ತಿದೆಯೇ ರಾಜ್ಯದಲ್ಲಿ ಬೋಟ್ ಹೌಸ್ ಗಳಿಗೆ ಪರವಾನಿಗೆ ನೀಡಲಾಗಿದೆಯೇ; | ಪ್ರವಾಸೋದ್ಯಮ ಇಲಾಖೆಯಿಂದ ಈವರೆಗೂ ಬೋಟ್ ಹೌಸ್ ಸೌಲಭ್ಯವನ್ನು ಒದಗಿಸಲಾಗಿರುವುದಿಲ್ಲ.<br><br>ಆದರೆ, ಉಡುಪಿ ಜಿಲ್ಲೆಯಲ್ಲಿ 2018-19ನೇ ಸಾಲಿನಿಂದ ಒಟ್ಟು 04 ಬೋಟ್ ಹೌಸ್‌ನ್ನು ಗುರುತಿಸಲಾಗಿರುತ್ತದೆ. ಉಡುಪಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಬೋಟ್ ಹೌಸ್‌ಗಳಿಗೆ ಪರವಾನಿಗೆ ನೀಡಿರುತ್ತಾರೆ.<br><br>ಕರ್ನಾಟಕ ಪ್ರವಾಸೋದ್ಯಮ ನೀತಿ 2020-26 ರಡಿ ಬೋಟ್ ಹೌಸ್ ಯೋಜನೆಯಲ್ಲಿ ಹೂಡಿಕೆ ಮಾಡುವ ಹೂಡಿಕೆದಾರರಿಗೆ ಪ್ರೋತ್ಸಾಹಕಗಳು, ಸಹಾಯಧನ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. |
| ಇ) | ರಾಜ್ಯವು ಅತೀ ದೊಡ್ಡ ಪ್ರಮಾಣದಲ್ಲಿ ಕಡಲ ತೀರವನ್ನು ಹೊಂದಿದ್ದು, ಈ ಕಡಲ ತೀರದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಉತ್ತೇಜಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: ರಾಜ್ಯದ ಕಡಲ ತೀರಗಳನ್ನು ಸಹ ಗೋವಾ ಮಾದರಿಯಲ್ಲಿ ಪ್ರವಾಸಿಗಳ ಆಕರ್ಷಣೆಯ ಪ್ರೇಕ್ಷಣಿಯ ಸ್ಥಳವನ್ನಾಗಿ ರೂಪಿಸಲು ಸರ್ಕಾರ ಯಾವ ಯೋಜನೆ ಹೊಂದಿದೆ; | ರಾಜ್ಯದಲ್ಲಿರುವ ಕಡಲ ತೀರಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ವಿರಾಮ, ಮನರಂಜನೆ ಮತ್ತು ಸಾಹಸ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಸಾಹಸ ಪ್ರವಾಸೋದ್ಯಮ ಯೋಜನೆ, ಪರಿಸರ ಪ್ರವಾಸೋದ್ಯಮ ಯೋಜನೆ ಮತ್ತು ಬೋಟ್ ಹೌಸ್ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗೀ ಹೂಡಿಕೆದಾರರಿಗೆ ಸಹಾಯಧನ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಕರ್ನಾಟಕ ಪ್ರವಾಸೋದ್ಯಮ ನೀತಿ 2020-26 ರಡಿ ಅವಕಾಶ ಕಲ್ಪಿಸಲಾಗಿದೆ.<br><br>ಪ್ರವಾಸೋದ್ಯಮ ಇಲಾಖೆಯಿಂದ ಕರಾವಳಿ ಜಿಲ್ಲೆಗಳಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಒದಗಿಸಿರುವ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಉಡುಪಿ ಜಿಲ್ಲೆಯ ಪ್ರಮುಖ ಬೀಚ್‌ಗಳ ನಿರ್ವಹಣೆ ಅಧ್ಯಯನವನ್ನು ಮಾಡಲು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ವತಿಯಿಂದ ಇಲಾಖೆಯಿಂದ ಬಿಡುಗಡೆಯಾದ ರೂ.10.00 ಲಕ್ಷ ಅನುದಾನದಲ್ಲಿ NIWS (National Institute of Water Sports) ಗೋವಾ ರವರಿಂದ ಸಮಗ್ರ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ. |

| | | |
|---|---|---|
| | | ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದ ಕಡಲ ತೀರ ಪ್ರದೇಶವನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕಾಮಗಾರಿಗಳ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಈ) | ರಾಜ್ಯಕ್ಕೆ ಪ್ರವಾಸೋದ್ಯಮದಿಂದ ಬರುವ ಒಟ್ಟಾರೆ ಆದಾಯವೆಷ್ಟು; ಪ್ರವಾಸೋದ್ಯಮದಿಂದ ಅಂದಾಜು ರಾಜ್ಯದಲ್ಲಿ ಸೃಷ್ಠಿಯಾಗುತ್ತಿರುವ ನೇರ ಮತ್ತು ಪರೋಕ್ಷ ಉದ್ಯೋಗಗಳ ಸಂಖ್ಯೆ ಎಷ್ಟು; ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವುದರಿಂದ ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಪ್ರಯತ್ನಿಸುತ್ತಿದೆಯೇ; ಇದಕ್ಕೆ ಯಾವ ರೀತಿ ಯೋಜನೆ ಮಾಡಲಾಗಿದೆ? | ಪ್ರವಾಸೋದ್ಯಮದಿಂದಾಗಿ ರಾಜ್ಯದ ಬೊಕ್ಕಸಕ್ಕೆ ನೇರವಾಗಿ ಯಾವುದೇ ಆದಾಯವುಬರುವುದಿಲ್ಲ. ಆದರೆ, ಪ್ರವಾಸೋದ್ಯಮದಿಂದ ಪ್ರವಾಸಿಗರ ಭೇಟಿಯಿಂದಾಗಿ ಸಾರಿಗೆ, ಇಂಧನ, ಹೋಟೆಲ್/ರೆಸಾರ್ಟ್ ಗಳಿಂದ ಸಂಗ್ರಹವಾಗುವ ಜಿ.ಎಸ್.ಟಿ, ಇವುಗಳಿಂದ ಪರೋಕ್ಷವಾಗಿ ಆದಾಯ ಸ್ವೀಕೃತವಾಗುತ್ತದೆ.<br><br>ಪ್ರವಾಸೋದ್ಯಮದಿಂದ ನೇರ ಮತ್ತು ಪರೋಕ್ಷವಾಗಿ ಸೃಷ್ಟಿಯಾಗುತ್ತಿರುವ ಉದ್ಯೋಗಗಳ ಸಂಖ್ಯೆಯನ್ನು ನಿಖರವಾಗಿ ತಿಳಿಸಲು ಕಷ್ಟಸಾಧ್ಯವಾಗಿರುತ್ತದೆ.<br><br>ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವುದರಿಂದ ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಪ್ರಯತ್ನಿಸುತ್ತಿದೆ. ಇದಕ್ಕಾಗಿ ಕರ್ನಾಟಕ ಪ್ರವಾಸೋದ್ಯಮ ನೀತಿ 2020-26ರಡಿ ಗುರುತಿಸಿರುವ 26 ತರಹದ ಪ್ರವಾಸಿ ಯೋಜನೆಗಳಲ್ಲಿ ಹೂಡಿಕೆ ಮಾಡಲು ಬರುವ ಖಾಸಗೀ ಹೂಡಿಕೆದಾರರಿಗೆ ಪ್ರೋತ್ಸಾಹಕಗಳು, ಸಹಾಯಧನ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಹೆಚ್ಚುವರಿ ಸೌಲಭ್ಯಗಳ ನಿರ್ಮಾಣದಿಂದಾಗಿ ಸಾಕಷ್ಟು ಉದ್ಯೋಗಾವಕಾಶಗಳ ಸೃಷ್ಟಿಯು ಸಹ ಆಗುತ್ತದೆ. ಇದಲ್ಲದೇ, ಪ್ರವಾಸೋದ್ಯಮ ಚಟುವಟಿಕೆಗಳಾದ ಹೋಂ ಸ್ಟೇ, ಜಲಸಾಹಸ ಕ್ರೀಡೆ, ಹೋಟೆಲ್/ರೆಸಾರ್ಟ್‌ಗಳಿಗೆ ಹಾಗೂ ಇನ್ನಿತರೆ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಅನುಮೋದನೆ ನೀಡುವ ಮೂಲಕ ಪರೋಕ್ಷವಾಗಿ ಉದ್ಯೋಗಾವಕಾಶ ಸೃಷ್ಟಿಸಲಾಗುತ್ತಿದೆ. |

**ಸಂಖ್ಯೆ:ಟಿಓಆರ್ 159 ಟಿಡಿವಿ 2024**

(ಎಚ್.ಕೆ.ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನ
ಹಾಗೂ ಪ್ರವಾಸೋದ್ಯಮ ಸಚಿವರು

## ಅನುಬಂಧ-1

**ಕಳೆದ ಮೂರು ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಜಿಲ್ಲಾ ಉತ್ಸವಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ**

| ಕ್ರ. ಸಂ | ಜಿಲ್ಲೆ | ಉತ್ಸವಗಳು | ಬಿಡುಗಡೆ ಮಾಡಿರುವ ಅನುದಾನ | | | |
|---|---|---|---|---|---|---|
| | | | 2021-22 | 2022-23 | 2023-24 | ಒಟ್ಟು |
| 1 | ದಕ್ಷಿಣ ಕನ್ನಡ | ಕಂಬಳ ಉತ್ಸವ | 10.00 | 0.00 | 0.00 | 10.00 |
| | | ರಾಮ ಲಕ್ಷಣ ಜೋಡುಕೆರೆ-6ನೇ ಮಂಗಳೂರು ಕಂಬಳ ಉತ್ಸವ | 0.00 | 3.00 | 0.00 | 3.00 |
| | | ದಕ್ಷಿಣ Indian Open of Surfing | 15.00 | 0.00 | 15.00 | 30.00 |
| | | Indian Paddle Festival | 0.00 | 0.00 | 25.00 | 25.00 |
| | | Vintage & Classic Car Carnival ಕಾರ್ಯಕ್ರಮ | 0.00 | 1.00 | 0.00 | 1.00 |
| | | ಪಿಳಿಕುಳ ನೇತ್ರಾವತಿ-ಫಲ್ಗುಣಿ ಜೋಡುಕೆರೆ ಕಂಬಳ ಉತ್ಸವ | 0.00 | 5.00 | 0.00 | 5.00 |
| 2 | ಉತ್ತರ ಕನ್ನಡ | ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ನಡೆದ ಕದಂಬೋತ್ಸವ | 0.00 | 5.00 | 0.00 | 5.00 |
| 3 | ಉಡುಪಿ | ಕಾರ್ಕಳ ಉತ್ಸವ | 25.00 | 0.00 | 0.00 | 25.00 |
| | | ಡಾ. ಶಿವರಾಮ ಕಾರಂತ ಥೀಮ್ ಪಾರ್ಕ್ ಕಾರ್ಯಕ್ರಮಕ್ಕೆ | 0.00 | 10.00 | 0.00 | 10.00 |
| | | **ಒಟ್ಟು** | **50.00** | **24.00** | **40.00** | **114.00** |

## ಅನುಬಂಧ -2

## ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದ ಕಡಲ ತೀರ ಪ್ರದೇಶವನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಕಾಮಗಾರಿಯ ಹಂತ |
|---|---|---|---|---|---|---|
| 1 | 2 | 3 | 4 | 5 | 6 | 7 |
| | **ಉಡುಪಿ ಜಿಲ್ಲೆ** | | | | | |
| | **ಉಡುಪಿ ತಾಲ್ಲೂಕು** | | | | | |
| 1 | ತೆಂಕನಿದಿಯೂರು ಹಂಪನಕಟ್ಟೆ ಕದಿಕೆ ಬೀಚ್ ರಸ್ತೆ ಅಭಿವೃದ್ಧಿ | 2016-17 ಬಂಡವಾಳ ವೆಚ್ಚಗಳು | 150.00 | ಕೆಆರ್ಐಡಿಎಲ್ | 120.00 | ಕಾಮಗಾರಿ ಪೂರ್ಣಗೊಂಡಿದೆ |
| 2 | ಉಡುಪಿ ಜಿಲ್ಲೆಯ ಸೈಂಟ್ ಮೆರೀಸ್ ಐಲ್ಯಾಂಡ್ ಬಳಿ ಫೆರ್ರಿ ಜೆಟ್ಟಿ ನಿರ್ಮಿಸುವುದು. | 2019-20 | 550.00 | ಲೋಕೋಪಯೋಗಿ ಇಲಾಖೆ | 140.00 | ಪ್ರಾರಂಭಿಸ ಬೇಕಿದೆ |
| | **ಕುಂದಾಪುರ** | | | | | |
| 3 | ತಾಸ್ರಿ ಮರವಂತೆ ಕಡಲ ತೀರದಲ್ಲಿ Marine drive Works | 2018-19 ಬಂಡವಾಳ ವೆಚ್ಚಗಳು | 25.00 | ಲೋಕೋಪಯೋಗಿ ಇಲಾಖೆ | 25.00 | ಕಾಮಗಾರಿ ಪ್ರಗತಿಯಲ್ಲಿದೆ |
| 4 | ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸಿ ಮರವಂತೆ ಕಡಲ ತೀರದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವುದು. | 2021-22 | 995.50 | ಕೆ.ಟಿ.ಐ.ಎಲ್. | 250.00 | ಕಾಮಗಾರಿ ಪ್ರಗತಿಯಲ್ಲಿದೆ |
| | **ಬೈಂದೂರು** | | | | | |
| 5 | ಉಡುಪಿ ಜಿಲ್ಲೆ, ಬೈಂದೂರು ತಾಲ್ಲೂಕಿನ ಕರಿಮಂಜೇಶ್ವರ ಗ್ರಾಮದ ಹೊಸಹಿತ್ಲು ಸಮುದ್ರ ಕಿನಾರೆ ಬಳಿ ಕುಟೀರ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ, ಹೈ ಮಾಸ್ಟ್ ದೀಪ ಅಳವಡಿಕೆ ಹೀಗೆ ಹಲವಾರು ಮೂಲಭೂತ ಸೌಕರ್ಯಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು. | 2018-19 ಬಂಡವಾಳ ವೆಚ್ಚಗಳು | 15.00 | ಲೋಕೋಪಯೋಗಿ ಇಲಾಖೆ | 13.37 | ಕಾಮಗಾರಿ ಪೂರ್ಣಗೊಂಡಿದೆ |
| 6 | ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಸೋಮೇಶ್ವರ ಕಡಲ ತೀರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ | 2021-22 | 971.31 | ಕೆ.ಟಿ.ಐ.ಎಲ್. | 526.99 | ಕಾಮಗಾರಿ ಪ್ರಗತಿಯಲ್ಲಿದೆ |
| 7 | ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಪಡುವರಿ ಸೋಮೇಶ್ವರದ ಶ್ರೀ ಸೋಮನಾಥೇಶ್ವರ ದೇವಸ್ಥಾನದ ಬಳಿ ಅಭಿವೃದ್ಧಿ ಕಾಮಗಾರಿ | 2023-224 | 124.00 | ಕೆ.ಟಿ.ಐ.ಎಲ್. | 41.00 | ಕಾಮಗಾರಿ ಪ್ರಾರಂಭಿಸಬೇಕಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಕಾಮಗಾರಿಯ ಹಂತ |
|---|---|---|---|---|---|---|
| 1 | 2 | 3 | 4 | 5 | 6 | 7 |
| | **ಕಾಪು** | | | | | |
| 8 | ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರದ ಪಡುಬಿದ್ರಿ ನಡಿಫಟ್ಟ ಬೀಚ್ ರಸ್ತೆಯ ಎಂಡ್ ಪಾಯಿಂಟ್‌ನಲ್ಲಿ ಸಂಪರ್ಕ ಸೇತುವೆ ಹಾಗೂ ಕೂಡು ರಸ್ತೆ ನಿರ್ಮಾಣ. | 2019-20 ಬಂಡವಾಳ ವೆಚ್ಚಗಳು | 75.00 | ಲೋಕೋಪಯೋಗಿ ಇಲಾಖೆ | 25.00 | ಕಾಮಗಾರಿ ಪೂರ್ಣಗೊಂಡಿದೆ |
| 9 | ಉಡುಪಿ ಜಿಲ್ಲೆಯ ಕಾಪು ಲೈಟ್ ಹೌಸ್ ಬೀಚ್ ಅಭಿವೃದ್ಧಿ ಕಾಮಗಾರಿ | 2022-23 | 500.00 | ಕೆ.ಟಿ.ಐ.ಎಲ್. | 0.00 | ಪ್ರಾರಂಭಿಸ ಬೇಕಿದೆ. |
| | **ಉಡುಪಿ ಜಿಲ್ಲೆಯ ಒಟ್ಟು** | | **3405.81** | | **1141.36** | |
| | **ದಕ್ಷಿಣ ಕನ್ನಡ ಜಿಲ್ಲೆ** | | | | | |
| | **ಮಂಗಳೂರು** | | | | | |
| 10 | ಮಂಗಳೂರು ತಾಲ್ಲೂಕು ತಣ್ಣೀರುಬಾವಿ ಕಡಲ ತೀರಕ್ಕೆ ಸಂಪರ್ಕ ರಸ್ತೆ ದುರಸ್ತಿ, ಅಗಲೀಕರಣ, ಕಾಂಕ್ರಿಟೀಕರಣ ಹಾಗೂ ಇತರೆ ಕಾಮಗಾರಿ (ಮಂಗಳೂರು ತಾಲ್ಲೂಕು ವಾರ್ಡ್ ನಂ.16ರ ಬಂಗ್ರ ಕೂಳೂರು ಪಡುಕೋಡಿ ರಸ್ತೆ ಅಗಲೀಕರಣ, ಕಾಂಕ್ರಿಟೀಕರಣ, ಚರಂಡಿ ನಿರ್ಮಾಣ, ಸೈಕಲ್ ಟ್ರ್ಯಾಕ್ ನಿರ್ಮಾಣ (3.00 ಕಿ.ಮೀ) **ಬದಲಾಗಿ**) | 2019-20 ಬಂಡವಾಳ ವೆಚ್ಚಗಳು | 100.00 | ಕೆಆರ್ ಐಡಿಎಲ್ | 73.00 | ಕಾಮಗಾರಿ ಪೂರ್ಣಗೊಂಡಿದೆ |
| | **ಬೆಳ್ತಂಗಡಿ** | | | | | |
| 11 | ಬೆಳ್ತಂಗಡಿ ತಾಲ್ಲೂಕಿನ ಮಲವಂತಿಕೆ ಗ್ರಾಮದ ಫಾಲ್ಸ್ ನ್ನು ಪ್ರವಾಸೋದ್ಯಮ ಕ್ಷೇತ್ರವಾಗಿ ಗುರುತಿಸಿ, ಅಭಿವೃದ್ಧಿಪಡಿಸುವುದು. | 2019-20 ಬಂಡವಾಳ ವೆಚ್ಚಗಳು | 150.00 | ಕೆಆರ್ ಐಡಿಎಲ್ | 100.00 | ಸೇತುವೆ ಹಾಗೂ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕೆಲಸ ಪ್ರಗತಿಯಲ್ಲಿದೆ |
| 12 | ಮೂಲ್ಕಿ - ಮೂಡುಬಿದಿರೆ ಕ್ಷೇತ್ರದ ಸಸಿಹಿತ್ಲು ಕಡಲತೀರದಲ್ಲಿ ಕುಡಿಯುವ ನೀರಿನ ಸೌಲಭ್ಯ ಹಾಗೂ ಬೀದಿ ದೀಪ ಅಳವಡಿಸುವುದು. | 2022-23 | 25.00 | ಕೆ.ಟಿ.ಐ.ಎಲ್. | 0.00 | ಪ್ರಾರಂಭಿಸ ಬೇಕಿದೆ. |
| | **ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು:** | | **275.00** | | **173.00** | |
| | **ಉತ್ತರ ಕನ್ನಡ ಜಿಲ್ಲೆ** | | | | | |
| | **ಭಟ್ಕಳ ತಾಲ್ಲೂಕು** | | | | | |
| 13 | ಉತ್ತರಕನ್ನಡ ಜಿಲ್ಲೆಯ ಮುರುಡೇಶ್ವರ ಬೀಚ್‌ನಲ್ಲಿ ಜಟ್ಟಿ ನಿರ್ಮಾಣ (ಭಟ್ಕಳ) | 2016-17 ಬಂಡವಾಳ ವೆಚ್ಚಗಳು | 200.00 | ಕರ್ನಾಟಕ ಕಡಲ ಮಂಡಳಿ | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ/ಯೋಜನೆ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಕಾಮಗಾರಿಯ ಹಂತ |
|---|---|---|---|---|---|---|
| 1 | 2 | 3 | 4 | 5 | 6 | 7 |
| | **ಜೋಯಿಡಾ ತಾಲ್ಲೂಕು** | | | | | |
| 14 | ಉತ್ತರಕನ್ನಡ ಜಿಲ್ಲೆಯ ದೇವಬಾಗ್ ಬೀಚ್‌ನಲ್ಲಿ ಪ್ರವಾಹ ರಕ್ಷಣಾ ಕಾಮಗಾರಿ. [ಜಟ್ಟಿ ನಿರ್ಮಾಣದ ಬದಲು ಈ ಕಾಮಗಾರಿ ಕೈಗೊಳ್ಳಲಾಗಿದೆ] | 2016-17 ವಿಶೇಷ ಅಭಿವೃದ್ಧಿ ಯೋಜನೆ | 205.73 | ಲೋಕೋಪಯೋಗಿ ಇಲಾಖೆ | 200.00 | ಕಾಮಗಾರಿ ಪೂರ್ಣಗೊಂಡಿದೆ. |
| 15 | ನೇತ್ರಾಣಿ ಬೀಚ್‌ನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಜೆಟ್ಟಿ ನಿರ್ಮಾಣ ಕಾಮಗಾರಿ | 2016-17 ವಿಶೇಷ ಅಭಿವೃದ್ಧಿ ಯೋಜನೆ | 200.00 | ಕರ್ನಾಟಕ ಕಡಲ ಮಂಡಳಿ | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 16 | ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಳಿ ನದಿಯು ಟ್ಯಾಗೋರ್ ಬೀಚ್ ಸೇರುವ ಸ್ಥಳದಲ್ಲಿ ಕಾಳಿ ರಿವರ್ ಗಾರ್ಡನ್ ನಿರ್ಮಾಣ (ಕಾರವಾರ) | 2016-17 ವಿಶೇಷ ಅಭಿವೃದ್ಧಿ ಯೋಜನೆ | 200.00 | ಕರ್ನಾಟಕ ಕಡಲ ಮಂಡಳಿ | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| | **ಉತ್ತರ ಕನ್ನಡ ಜಿಲ್ಲೆಯ ಒಟ್ಟು** | | **805.73** | | **200.00** | |
| | **ಗ್ರ್ಯಾಂಡ್ ಟೋಟಲ್** | | **4486.54** | | **1514.36** | |